4. ತೊಬಟೆ ತೆಗೆದನಂತರ ಆ ಸಮ್ಬಂಧವಾದ ವಿಷಪ್ಪ ಳಿದಿಯು ಇಜಾರದಾರನಿಗೆ ಸೇರಿದ್ದಾಗಿ ಇರುತ್ತದೆ.

5. ಇಜಾರೆಗೆ ಸಂಬಂಧಪಟ್ಟ ಚಕ್ಕ ಜಮಾವಣಿ ಆದಬಗ್ಗೆ ತಪಶೀಲ್ ಲೆಕ್ಕ ಇಡತಕ್ಕದ್ದಲ್ಲದೆ ಅಂಥಾ ಲೆಕ್ಕವನ್ನು ಡಿಪ್ಯುಟಿ ಕಮ್ಮಿಷನರುಗಲಿ ಅಥವಾ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರರೇ ಆಗಲಿ ಅಥವಾ ಇವರುಗಳ ಪ್ಕೈಕಿ ಯಾರಿಂದಲೇ ಆಗಲಿ ನೇಮಿಸಲ್ಪಡುವ ಇತರ ಯಾವ ಆಫಿಸರರೇ ಆಗಲಿ ತನಿಖೆಗೆ ಬಂದಾಗ ಅವರ ತನಿಖೆಗೆ ಮೇಲ್ಕಂಡ ಲೆಕ್ಕಗಳನ್ನು ಹಾಜರ್ಮಾಡತಕ್ಕದ್ದು.

6. ಸಾಗಿಸಿಕೊಂಡು ಹೋಗುವ ಪ್ರತಿ ಬಂದು ಗಾಡಿ ಬೋಜ ಚಕ್ಕೆಗೂ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರರು ಮೊಕರರ್ ಮಾಡುವ ರೀತಿಯಲ್ಲಿ ಪ್ಯಾಸು ಪಡಿಯತಕ್ಕದ್ದು.

7. ಇಜಾರೆಗೆ ಸಂಬಂಧಪಟ್ಟ ವಿಷಪ್ಪ ಚಕ್ಕೆಯನ್ನು 1904ನೇ ಇಸವಿ ಜೂನ್ ಆಖೈರ್ ಒಳಗಾಗಿ ಜಮಾಯಿಸಿ ದಾಸ್ತಾನು ಇಟ್ಟುದ್ದಿವ ಕೋಣಗಳ ಯಾ ರೈಲ್ವೆ ಸ್ಟೇಷನ್ನುಗಳಲ್ಲಿನ ಚಕ್ಕೆಯನ್ನು ಡಿಸ್ಟ್ರಿಕ್ಟ್ ಸರಹದ್ದು ಹೊರಕ್ಕೆ ತೆಗದು ಕೊಂಡು ಹೋಗತಕ್ಕದ್ದು.

8. ಮೇಲೆ ನಮೂದಿಸುವ ಷರತ್ತಿನ ಯಾವದಾದರೂ ಬಂದು ಷರತ್ತಿಗಾದರೂ ತಪ್ಪು ನಡದಲ್ಲಿ ಇಜಾರೆಯು ಹಕ್ಕು ರದ್ದು ಮಾಡಲ್ಪಡುವದಲ್ಲದೆ ಅದುವರಿಗೆ ಜಮಾಯಿಸೋಣವಾಗಿದ್ದ ಚಕ್ಕೆ ವಿಷಪ್ಪವೂ ಸರಕಾರಕ್ಕೆ ದಂಡವಾಗಿ ತೆಗದು ಕೊಳ್ಳಲ್ಪಡತಕ್ಕದ್ದು. ಮತ್ತು ಇಜಾರೆದಾರನು ಡಿಪ್ಯುಟಿ ಕಮಿಷರ್ಸಾಹೇಬರವರಿಂದ 1,000 ಬಂದು ಸಾವಿರ ರೂಪಾಯಿವರಿಗೆ ಜುರ್ಮಾನೆ ವಿಧಿಸಲ್ಪಡುವದಕ್ಕೆ ಬದ್ದನಾಗಿರುತ್ತಾನೆ.

ಕೆ. ಶಾಮಯ್ಯಂಗಾರ್,
ಫಾರ್ ಡಿಪ್ಯುಟಿ ಕಮ್ಮಿಷನರ್, ಚಿತ್ರದುರ್ಗ ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್.

ಇಸ್ತಿಹಾರ್.

ತಾರೀಖು 26ನೇ ಮಾರ್ಚಿ 1903.

1903ನೇ ಜುಲೈ ಮಾಹೆ ಗುರ್ಪ ತಾರೀಖು ಲಾಗಾಯತು 1904ನೇ ಇಸವಿ ಜೂನ್ ಮಾಹೆ 30ರ ವರಿಗೆ ಷೆಡ್ಯೂಲ್ A ಯಲ್ಲಿ ನಮೂದುಮಾಡಿರುವ ಟೋಲ್ ಗೇಟುಗಳಲ್ಲಿ ಟೋಲ್ ಯಾನೆ ಸುಂಕವನ್ನು ವಸೂಲ್ಮಾಡುವ ಬಾಬನ್ನು ಅದರಲ್ಲಿ ಕಂಡ ತ್ತಾರೀಖುಗಳಲ್ಲಿ ಡೆಪ್ಯುಟಿ ಕಮಿಷನರವರಿಂದ ಯಾ ಅವರಿಂದ ಸ್ಪೆಷಲ್ಲಾಗಿ ನೇಮಿಸಲ್ಪಟ್ಟ ಇತರ ಆಫಿಸರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಹರಾಜಿನಲ್ಲಿ ಬಾಬನ್ನು ಪಡೆಯುವ ಕಂಟ್ರಾಕ್ಟುದಾರನು ಷೆಡ್ಯೂಲ್ B ಯಲ್ಲಿ ನಮೂದ ಮಾಡುವ ರೇಟಿನಂತೆಯೇ ಗೇಟುಗಳ ಮುಖಾಂತರ ಹೋಗುವ ಮತ್ತು ಬರುವ ಗಾಡಿ ವಗೈರೆಗಳ ಮೇಲೆ ಸುಂಕ ವಸೂಲ್ಮಾಡಬೇಕು. ಹೆಚ್ಚು ರೇಟನ್ನು ವಸೂಲ್ಮಾಡಕೂಡದು.

3. ಎಲ್ಲಾ ದರಕ್ಕಿಂತ ಜಾಸ್ತಿ ದರವನ್ನೇ ಆಗಲಿ ಅಥವಾ ಮತ್ಯಾವ ದರವನ್ನೇ ಆಗಲೀ ಮಂಜೂರ್ಮಾಡುವ ಅಧಿಕಾರವು ಡೆಪ್ಯುಟಿ ಕಮಿಷನರವರಲ್ಲಿ ಇರುತ್ತದೆ.

4. ಪ್ರತಿ ತಿಂಗಳು ಹತ್ತನೇ ತಾರೀಖಿನ ಮೊಳಗಾಗಿ ಹಿಂದಿನ ಮಾಹೆಯ ಖಿಸ್ತು ಮೊಬಲಗನ್ನು ಪಾವತೀ ಮಾಡಬೇಕು ಹರಾಜು ಆಖೈರು ಆದಕೂಡ್ಲೆ, ಬಾಬನ್ನು ಪಡೆಯತಕ್ಕ ಕಂಟ್ರಾಕ್ಟುದಾರನು ಎರಡು ಮಾಹಗಳ ಖಿಸ್ತಿಗೆ ಸರಿನಾದ ಮೊಬಲಗನ್ನು ಡಿಪಾಜಿಟ್ಟು ಒಗ್ಗೆ ಹಾಜರ್ಮಾಡಬೇಕು. ಷರತ್ತುಗಳ ಪ್ರಕಾರ ಕಂಟ್ರಾಕ್ಟು ನಡೆದರೆ, ಡಿಪಾಜಿಟ್ಟಿನಲ್ಲಿರುವ ಮೊಬಲಗನ್ನು ಆಖೈರು ಎರಡು ಮಾಹೆಗಳ ಖಿಸ್ತು ಬಗ್ಗೆ ಜವೆಗೆ ತೆಗದುಕೊಳ್ಳುತ್ತೆ.

5. ಹರಾಜು ಆಖೈರಾದ ಕೂಡ್ಲೆ ಡಿಪಾಜಿಟ್ಟು ಬಗ್ಗೆ ಮೊಬಲಗನ್ನು ಹಾಜರ್ಮಾಡದಿದ್ದರೆ, ಖರ್ಚಿಗೂ ಮತ್ತು ಲುಕ್ಸಾನಿಗೂ ಅವಲ್ ಕಂಟ್ರಾಕ್ಟುದಾರನನ್ನು ಗುರಿಪಡಿಸಿ, ಪುನಹಾ ಹರಾಜು ಮಾಡಲ್ಪಡುತ್ತೆ. ಖಿಸ್ತು ಮೊಬಲಗನ್ನು ವಾಯಿದೆಯೊಳಗೆ ಹಾಜರ್ಮಾಡಲು ತಪ್ಪಿದರೆ, ಪಾವತೀ ಮಾಡುವ ತಾರೀಖಿನವರಿವಿಗೆ ಮಾಹೆಯಾನಾ ರೂಪಾಯಿಗೆ ಬಂದು ಪೈನುತೆ ಬಡ್ಡಿಕೇಂಸಿ ಖಿಸ್ತು ಮೊಬಲಗು ವಸೂಲ್ಮಾಡಲ್ಪಡುತ್ತೆ. ಅಲ್ಲದೆ ಡೆಪ್ಯುಟಿ ಕಮಿಷನರವರು ಇಷ್ಟಪಟ್ಟಲ್ಲಿ ಉಳಿದ ಕಂಟ್ರಾಕ್ಟನ್ನು ಪುನಹಾ ಹರಾಜುಮಾಡಿ ಲುಕ್ಸಾನಾದಲ್ಲಿ ಸದರಿ ಮೊಬಲಗನ್ನು ಅವಲ್ ಕಂಟ್ರಾಕ್ಟುದಾರನಿಂದ ವಸೂಲ್ಮಾಡುತ್ತೆ. ಎರಡನೇ ಹರಾಜಿನಲ್ಲಿ ನಫೇಬಂದಲ್ಲಿ, ಮೊದಲು ಕಂಟ್ರಾಕ್ಟುದಾರನಿಗೆ ಸದರಿ ನಫೆಗೆ ಹಕ್ಕು ಇರುವದಿಲ್ಲಾ.

6. ಮೇಲ್ಕಂಡ 5 ಮತ್ತು 4ನೇ ಪ್ಯಾರಾಗಳಲ್ಲಿ ನಮೂದು ಮಾಡಿರುವ ಷರತ್ತುಗಳ ಬಳಪಟ್ಟು ಕಂಟ್ರಾಕ್ಟುದಾರು ಹರಾಜು ಮೊಬಲಿಗಿನ ಮೇಲೆ ರೂಪಾಯಿ ಬಂದಕ್ಕೆ ಬಂದಾಜೆಯಂತೆ ಲೋಕಲ್ ಸಸ್ಸನ್ನೂ ಸಹ ಶೇರಿಸಿ, ಪಾವತೀ ಮಾಡಬೇಕು.

7. ಪ್ರತಿ ದಿವಸದಲ್ಲೂ ಉತ್ಪತ್ತಿ ಆಗುವ ಮೊಬಲಗನ್ನ ತೋರಿಸುವಂತೆ ಖರಾರ್ವಾಕವಾಗಿ ಲೆಕ್ಕವನ್ನು ಕಂಟ್ರಾಕ್ಟುದಾರು ಇಡಬೇಕು. ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಉದ್ಯೋಗಸ್ತರು ಅಪೇಕ್ಷಿಸಿದ ಕಾಲದಲ್ಲಿ, ಇನ್ಸ್ಪೆಕ್ಷನ್ ಬಗ್ಗೆ ಹಾಜರ್ಮಾಡಬೇಕು.

8. ಮೇಲ್ಕಂಡ 7ನೇ ಪ್ಯಾರಾದಲ್ಲಿ ನಮೂದು ಮಾಡಿರುವಂತೆ ಗೇಟುಗಳ ಮುಖಾಂತರ ಹೋಗತಕ್ಕ ಗಾಡಿ ವಗೈರೆ ಟ್ರಾಫಿಕ್‌ಗಳ ಲೆಕ್ಕಗಳನ್ನು ಖರಾರ್ವಾಕವಾಗಿ ಇಡಲು, ಕಂಟ್ರಾಕ್ಟುದಾರನ ಸ್ವಂತ ಖರ್ಚಿನಿಂದ ಒಬ್ಬ ಮುತ್ಸದ್ದಿಯನ್ನು ಇಡಬೇಕು.

9. ಹಾಲಿವಿರುವ ಟೋಲ್ ಗೇಟುಗಳನ್ನು ಮತ್ತು ಮನೆಗಳನ್ನು ಒಳ್ಳೇಸ್ಥಿತಿಯಲ್ಲಿ ಇಟ್ಟುಕೊಂಡು ಇರಬೇಕು ಕಂಟ್ರಾಕ್ಟುದಾರನ ಕೆಲಸವಾಗಿರುತ್ತೆ. ಹೊಸ ಗೇಟುಗಳೇ ಆಗಲಿ ಮನೆಗಳೇ ಆಗಲಿ ಆವಶ್ಯಕವಿದ್ದಲ್ಲಿ ಗವರ್ನ್‌ಮೆಂಟಿನ ಖರ್ಚಿನಿಂದ ತಯಾರ್ಮಾಡಿಸಲ್ಪಡುತ್ತೆ.

10. ಲೇಟ್ ಟೀಫ್ ಕಮಿಷನರ್ ಸಾಹೇಬರವರ 4–11–1876ನೇ ಮುದ್ರಾಂ 274ನೇ ನಂಬರು ನೋಟಿಫಿಕೇಷನ್ನೊಡನೆ ಸಾದ್ಯಾಕಿರುವ ರೂಲ್ಸುಗಳಿಗೆ ಕಂಟ್ರಾಕ್ಟುದಾರರು ಬದ್ಧರಾಗಿರಬೇಕು.

11. ಮೂಳೆ ಅಥವಾ ಗೊಬ್ಬರದಿಂದ ಭರ್ತಿಯಾಗಿರುವ ಗಾಡಿಗಳನ್ನು ಖಾಲಿಗಾಡಿಯಂತೆ ಭಾವಿಸಿ, ಆ ರೀತಿಯೇ ಸುಂಕ ವಸೂಲ್ಮಾಡತಕ್ಕದ್ದು.

ಷೆಡ್ಯೂಲ್. A.

ರಸ್ತೆಗಳು.	ಸ್ಟೇಷನ್‌ಗಳು.	ಹರಾಜುಗತಕ್ಕ ಸ್ಥಳ.	ಹರಾಜು ತಾರೀಖು.
1. ಬಂಗಳೂರು–ಮಂಗಳೂರು ರಸ್ತೆ, ಸಿವ್ಹಾಪುರದ ಬ್ರ್ಯಾಂಚು ರಸ್ತೆ	ಪೆರ್ಯಾಪಟ್ಟಣದ ಕೋಟೆಗೆ ಪಶ್ಚಿಮ ಎರಡು ರಸ್ತೆಗಳು ಸೇರುವ ಸ್ಥಳ	ಹುಣಸೂರು ತಾಲ್ಲೂಕ್ ಕಚೇರಿ	1902ನೇ ಮೇ ತಾರೀಖು 11ರಲ್ಲು
2. ಹಾಸನ–ಪೆರ್ಯಾಪಟ್ಟಣ–ಕನ್ಯಾನೂರು ರಸ್ತೆ ...	ಪೆರ್ಯಾಪಟ್ಟಣಕ್ಕೂ ಅಂಕನಹಳ್ಳಿಗೂ ಮಧ್ಯೆ		
3. ಮುದಾಸು–ಕನ್ಯಾನೂರು ರಸ್ತೆ ..	ಪಂಜವಳ್ಳಿ		
4. ಮೈಸೂರು–ಮಾನಂದವಾಡಿ ರಸ್ತೆ .	ಕಾರಾಪುರ	ಹೆಗ್ಗಡದೇವನ ಕೋಟೆ ತಾಲ್ಲೂಕ್ ಕಚೇರಿ	ಡಿಟೋ 13ರಲ್ಲು
5. ಗುಂಡ್ಲುಪೇಟೆ–ಸುಲ್ತಾನಬತೇರಿ ರಸ್ತೆ ..	ಮೂಲೆ ಹೊಳೆ		
6. ಬಂಗಳೂರು–ನೀಲಗಿರಿ ರಸ್ತೆ ..	ಬಂಡೀಪುರ	ಗುಂಡ್ಲುಪೇಟೆ ತಾಲ್ಲೂಕ್ ಕಚೇರಿ	ಡಿಟೋ 15ರಲ್ಲು
7. ನಂಜನಗೂಡು–ಹಾಸನೂರು ಗಾಟೆ ರಸ್ತೆ .	ಸುವರ್ಣಾವತೀ ಬ್ರಿಡ್ಜ್ ಅತ್ತಿ ಕಲ್ಲಪುರ	ಚಾಮರಾಜನಗರ ತಾಲ್ಲೂಕ್ ಕಚೇರಿ	ಡಿಟೋ 20ರಲ್ಲು

ಷೆಡ್ಯೂಲ್ B ರೇಟುಗಳು.

ತಪಶೀಲು.	ರೇಟುಗಳು.			ಪರಾ.
	ರೂ.	ಆ.	ಪೈ.	
ಪ್ರಯಾಣಸ್ಸರೊಡನೆ ನಾಲ್ಕು ಚಕ್ರದ ಗಾಡಿ	0	12	0	
ಡಿಟೋ ಇಲ್ಲದೆ ಇರುವ ಡಿಟೋ . ..	0	6	0	
ಡಿಟೋ ಇರುವ ಎರಡು ಚಕ್ರದ ಗಾಡಿ ..	0	8	0	
ಪ್ರಯಾಣಸ್ಸರೊಡನೆ ಇಲ್ಲದೆ ಇರುವ ಎರಡು ಚಕ್ರದಗಾಡಿ .. .	0	4	0	
ಗಾಡಿ ಬೋಜಾ ಸಹಿತವಾದದ್ದು.	0	4	0	
ಡಿಟೋ ಬೋಜಾ ಇಲ್ಲದ್ದು	0	2	0	
ಆನೆ	1	0	0	
ಒಂಟೆ	0	4	0	
ಕುದುರೆ ಸವಾರನುಳ್ಳದ್ದು	0	1	6	
ಡಿಟೋ ಸವಾರನಿಲ್ಲದ್ದು	0	0	9	
ಕುದುರೆ ಮರಿ, ಸವಾರನುಳ್ಳದ್ದು	0	0	9	
ಡಿಟೋ ಸವಾರನಿಲ್ಲದ್ದು	0	0	6	
ಎತ್ತು ಬೋಜಾ ವುಳ್ಳದ್ದು	0	1	0	
ಡಿಟೋ ಬೋಜಾ ಇಲ್ಲದ್ದು	0	0	6	
ಕತ್ತೆ ಬೋಜಾ ವುಳ್ಳದ್ದು	0	0	6	
ಡಿಟೋ ಬೋಜಾ ಇಲ್ಲದ್ದು	0	0	3	
ಪಲ್ಲಕಿ	0	4	0	
ಕೂರ್, ಆಡು ಯಾ ಹಂದಿ	0	0	1	

ತಾರೀಖು 26ನೇ ಮಾರ್ಚಿ 1903.

1903ನೇ ಇಸವಿ ಜುಲೈ ಮಾಹೆ ಗುರ್ತೇ ತಾರೀಖು ಲಾಗಾಯತು 1904ನೇ ಇಸವಿ ಜೂನ್ ಮಾಹೆ 30ರ ವರೆಗೆ ಯಡತೊರೆ ಟೋಲ್ ಗೇಟಿನಲ್ಲಿ ಟೋಲ್ಯಾನೆ ಸುಂಕವನ್ನು ವಸೂಲ್ಮಾಡುವ ಬಾಬನ್ನು 1903ನೇ ಇಸವಿ ಮೇ 9ನೇ ತಾರೀಖಿನಲ್ಲಿ ಡಿಪ್ಯೂಟಿ ಕಮಿಷನರವರಿಂದ ಯಾ ಅವರಿಂದ ಸ್ವೀಕರಿಸಲಾಗಿ ನೇಮಿಸಲ್ಪಟ್ಟ ಇತರ ಆಫೀಸರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಹರಾಜಿನಲ್ಲಿ ಬಾಬನ್ನು ಪಡೆಯುವ ಕಂಟ್ರಾಕ್ಟುದಾರನು ಷೆಡ್ಯೂಲ್‌ನಲ್ಲಿ ನಮೂದು ಮಾಡುವ ರೇಟಿನಂತೆಯೇ ಗೇಟುಗಳ ಮುಖಾಂತರ ಹೋಗುವ ಮತ್ತು ಬರುವ ಗಾಡಿ ವಗೈರೆಗಳ ಮೇಲೆ ಸುಂಕ ವಸೂಲ್ಮಾಡಬೇಕು. ಹೆಚ್ಚು ರೇಟನ್ನು ವಸೂಲ್ಮಾಡಕೂಡದು.

10. ಲೇಟ್ ಚೀಫ್ ಕಮಿಷನರ್ ಸಾಹೇಬರವರ 4—11—1876ನೇ ಮಾರ್ಚಿಂ 274ನೇ ನಂಬರು ನೋಟಿಫಿಕೇಷನ್ನೊಡನೆ ಸದರ್ಹಾಕಿರುವ ರೂಲ್ಸುಗಳಿಗೆ ಕಂಟ್ರಾಕ್ಟುದಾರರು ಬದ್ಧರಾಗಿರತಕ್ಕದ್ದು.

11. ಮೂಳೆ ಅಥವಾ ಗೊಬ್ಬರದಿಂದ ಭರ್ತಿಯಾಗಿರುವ ಗಾಡಿಗಳನ್ನು ಖಾಲಿಗಾಡಿಯಂತೆ ಭಾವಿಸಿ, ಆ ರೀತಿಯೇ ಸುಂಕ ವಸೂಲ್ಮಾಡತಕ್ಕದ್ದು.

ಷೆಡ್ಯೂಲ್. A.

ರಸ್ತೆಗಳು.	ಸ್ಥಳಗಳು.	ಹರಾಜಾಗತಕ್ಕ ಸ್ಥಳ.	ಹರಾಜು ತಾರೀಖು.
1. ಬಂಗಳೂರು—ಮಂಗಳೂರು ರಸ್ತೆ, ಸಿದ್ಧಾಪುರದ ಬ್ರಾಂಚು ರಸ್ತೆ	ಪೆರ್ಯಾಪಟ್ಟಣ ಕೋಟೆಗೆ ಪಶ್ಚಿಮ ಎರಡು ರಸ್ತೆಗಳು ಸೇರುವ ಸ್ಥಳ	ಹುಣಸೂರು ತಾಲ್ಲೂಕ ಕಚೇರಿ	1902ನೇ ಮೇ ತಾರೀಖು 11ನೆಲ್ಲು
2. ಹುಣಸೂರು—ಪೆರ್ಯಾಪಟ್ಟಣ—ಕನ್ಯಾನೂರು ರಸ್ತೆ ...	ಪೆರ್ಯಾಪಟ್ಟಣಕ್ಕೂ ಅಂಕನಹಳ್ಳಿಗೂ ಮಧ್ಯೆ		
3. ಮುದರಾಸು—ಕನ್ಯಾನೂರು ರಸ್ತೆ ..	ಪಂಜವಳ್ಳಿ		
4. ಮೈಸೂರು—ಮಾನಂದವಾಡಿ ರಸ್ತೆ .	ಕಾರಾಪುರ	ಹೆಗ್ಗಡದೇವನ ಕೋಟೆ ತಾಲ್ಲೂಕ ಕಚೇರಿ	ಡಿಟೋ 13ನೆಲ್ಲು
5. ಗುಂಡ್ಲುಪೇಟೆ—ಸುಲ್ತಾನಬತೇರಿ ರಸ್ತೆ ..	ಮೂಲೆ ಹೊಳೆ		
6. ಬಂಗಳೂರು—ನೀಲಗಿರಿ ರಸ್ತೆ ..	ಬಂಡೀಪುರ	ಗುಂಡ್ಲುಪೇಟೆ ತಾಲ್ಲೂಕ ಕಚೇರಿ	ಡಿಟೋ 15ನೆಲ್ಲು
7. ನಂಜನಗೂಡು—ಹುಸನೂರು ಗಾಟೆ ರಸ್ತೆ .	ಸುವರ್ಣಾವತೀ ಬ್ರಿಡ್ಜ್ ಅತ್ತಿಕಲ್ಪುರ	ಚಾಮರಾಜನಗರ ತಾಲ್ಲೂಕ ಕಚೇರಿ	ಡಿಟೋ 20ನೆಲ್ಲು

ಷೆಡ್ಯೂಲ್ B ರೇಟುಗಳು.

ತಪಶೀಲು.	ರೇಟುಗಳು.			ಪರಾ.
	ರೂ.	ಅ.	ಪೈ.	
ಪ್ರಯಾಣಸರೊಡನೆ ನಾಲ್ಕು ಚಕ್ರದ ಗಾಡಿ				
ಡಿಟೋ ಇಲ್ಲದೆ ಇರುವ ಡಿಟೋ	0	12	0	
ಡಿಟೋ ಇರುವ ಎರಡು ಚಕ್ರದ ಗಾಡಿ ..	0	6	0	
ಪ್ರಯಾಣಸರೊಡನೆ ಇಲ್ಲದೆ ಇರುವ ಎರಡು ಚಕ್ರದಗಾಡಿ ..	0	8	0	
ಗಾಡಿ ಬೋಜಿ ಸಹಿತವಾದದ್ದು.	0	4	0	
ಡಿಟೋ ಬೋಜಿ ಇಲ್ಲದ್ದು	0	4	0	
ಆನೆ	0	2	0	
ಒಂಟೆ	1	0	0	
ಕುದುರೆ ಸವಾರನಿಳ್ಳದ್ದು	0	4	0	
ಡಿಟೋ ಸವಾರನಿಲ್ಲದ್ದು	0	1	6	
ಕುದುರೆ ಮರಿ ಸವಾರನಿಳ್ಳದ್ದು	0	0	9	
ಡಿಟೋ ಸವಾರನಿಲ್ಲದ್ದು	0	0	9	
ಎತ್ತು ಬೋಜಿ ವುಳ್ಳದ್ದು	0	0	6	
ಡಿಟೋ ಬೋಜಿ ಇಲ್ಲದ್ದು	0	1	0	
ಕತ್ತೆ ಬೋಜಿ ವುಳ್ಳದ್ದು	0	0	6	
ಡಿಟೋ ಬೋಜಿ ಇಲ್ಲದ್ದು	0	0	6	
ಪಲ್ಲಕಿ	0	0	3	
ಕಾಲ್, ಆಡು ಯಾ ಹಂದಿ	0	4	0	
	0	0	1	

ತಾರೀಖು 26ನೇ ಮಾರ್ಚಿ 1903.

1903ನೇ ಇಸವಿ ಜುಲೈ ಮಾಹೆ ಗುರ್ತೇ ತಾರೀಖು ಲಾಗಾಯ್ತು 1904ನೇ ಇಸವಿ ಜೂನ್ ಮಾಹೆ 30ರ ವರೆಗೆ ಯಡತೊರೆ ರೈಲ್ವೇ ಗೇಟಿನಲ್ಲಿ ಟೋಲ್ಯಾನೆ ಸುಂಕವನ್ನು ವಸೂಲ್ಮಾಡುವ ಬಾಬನ್ನು 1903ನೇ ಇಸವಿ ಮೇ 9ನೇ ತಾರೀಖಿನಲ್ಲಿ ಡಿಪ್ಯೂಟಿ ಕಮಿಷನರವರಿಂದ ಯಾ ಅವರಿಂದ ಸ್ವೀಸ್ಟಾಗಿ ನೇಮಿಸಲ್ಪಟ್ಟ ಇತರ ಆಫೀಸರಿಂದ ಒಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಹರಾಜಿನಲ್ಲಿ ಬಾಬನ್ನು ಪಡೆಯುವ ಕಂಟ್ರಾಕ್ಟುದಾರನು ಷೆಡ್ಯೂಲ್‌ನಲ್ಲಿ ನಮೂದು ಮಾಡುವ ರೇಟಿನಂತೆಯೇ ಗೇಟುಗಳಲ್ಲಿ ಮುಖಾಂತರ ಹೋಗುವ ಮತ್ತು ಬರುವ ಗಾಡಿ ವಗೈರೆಗಳ ಮೇಲೆ ಸುಂಕ ವಸೂಲ್ಮಾಡತಕ್ಕದ್ದು. ಹೆಚ್ಚು ರೇಟನ್ನು ವಸೂಲ್ಮಾಡತಕ್ಕದ್ದು.

4. ಕಂಟ್ರಾಕ್ಟುದಾರನು ಪ್ರತಿ ತಿಂಗಳು 10ನೇ ತಾರೀಖಿನ ಒಳಗಾಗಿ ಹಿಂದಿನ ಮಾಹೆಯ ಖಿಸ್ತು ಪೊಬಲಗನ್ನು ಹಾಜರ್ಮಾಡಿ ರಸೀತಿ ಪಡೆಯಬೇಕು. ಹರಾಜು ಆಖೈರಾದ ಕೂಡ್ಲೆ ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಎರಡು ತಿಂಗಳ ಕಂಟ್ರಾಕ್ಟು ಪೊಬಲಗನ್ನು ಅಮಾನತ್ತಿನಲ್ಲಿಡಬೇಕು. ಪರತ್ತುಗಳಮೇರೆ ನಡದುಕೊಂಡರೆ, ಅಮಾನತ್ತಿನಲ್ಲಿ ಇಟ್ಟಿರುವ ಪೊಬಲಗನ್ನು ಆಖೈರು ಎರಡು ಮಾಹೆಗಳ ಖಿಸ್ತು ಒಗ್ಗೆ ಜಮಾ ತೆಗದುಕೊಳ್ಳಲ್ಪಡುತ್ತೆ.

5. ಹರಾಜಾದ ಕೂಡ್ಲೆ ಡಿಪಾಜಿಟ್ಟು ಪೊಬಲಗನ್ನು ಹಾಜರ್ಮಾಡದೇ ಇದ್ದರೆ ಹರಾಜು ಹಕ್ಕುದಾರಿಯನ್ನು ಅವಲ್ ಕಂಟ್ರಾಕ್ಟುದಾರನ ಖರ್ಚಿಗೂ ಮತ್ತು ಲುಕ್ಸಾನಿಗೂ ಒಳಪಡಿಸಿ ಪುನಹ ಹರಾಜು ಮಾಡಲ್ಪಡುವದು. ಪ್ರತಿ ಮಾಹೆಯಲ್ಲೂ ಕೊಡತಕ್ಕ ಖಿಸ್ತು ಪೊಬಲಗನ್ನು ಗೊತ್ತು ಮಾಡಲ್ಪಟ್ಟ ತಾರೀಖಿನ ಒಳಗಾಗಿ ಹಾಜರ್ಮಾಡಲು ತಪ್ಪಿದರೆ, ಪಾವತೀ ಮಾಡಬೇಕಾಗಿರುವ ಪೊಬಲಗಿನ ಮೇಲೆ ಪಾವತೀ ಮಾಡುವ ತಾರೀಖಿನವರಿಗೆ ಮಾಹೆಯಾನ ರೂಪಾಯಿ ಒಂದಕ್ಕೆ ಒಂದು ಪೈನಂತೆ ಬಡ್ಡಿ ಶೇರಿಸಿ ಖಿಸ್ತು ಪೊಬಲಗನ್ನು ವಸೂಲ್ಮಾಡಲ್ಪಡುತ್ತೆ. ಅಲ್ಲದೆ ಉಳಿದ ಕಂಟ್ರಾಕ್ಟನ್ನು ಡೆಪ್ಯುಟಿ ಕವಿಷನರವರು ಇಷ್ಟಪಟ್ಟಲ್ಲಿ ಲುಕ್ಸಾನಿಗೆ ಅವಲ್ ಕಂಟ್ರಾಕ್ಟುದಾರನನ್ನು ಬಳಪಡಿಸಿ ಹರಾಜು ಮಾಡಲ್ಪಡುತ್ತ. ಎರಡನೇ ಹರಾಜಿಂದ ನಫೇಬಂದಲ್ಲಿ ಮೊದಲು ಕಂಟ್ರಾಕ್ಟುದಾರನು ಸದರೀ ನಫೆಗೆ ಹಕ್ಕುದಾರನಾಗಿರುವದಲ್ಲ.

6. ಕಂಟ್ರಾಕ್ಟುದಾರನು ಪ್ರತಿಸಂತೆಯಲ್ಲಿಯೂ ವಸೂಲಾಗುವ ಫೀಯನ್ನು ತಪಶೀಲಾಗಿ ತಿಳಿಯುವಂತೆ ಬಂದು ಲಿಖಿತವನ್ನು ಇಟ್ಟುರಬೇಕು. ಸದರೀ ಲಿಖಿತವನ್ನು ತಾಲ್ಲೂಕು ವತ್ತು ಡಿಸ್ಟ್ರಿಕ್ಟು ಆಫೀಸಿನ ಹುದ್ದೇದಾರ್ರಿಗೆ ಅಪೇಕ್ಷಿಸಿದ ಕಾಲದಲ್ಲಿ ತೋರಿಸತಕ್ಕದ್ದಾಗಿರುತ್ತೆ.

7. ವೇಲ್ಕಂಡ ಪರತ್ತುಗಳ ಪೈಕಿ ಯಾವದಕ್ಕಾದರೂ ಕಂಟ್ರಾಕ್ಟುದಾರನೇ ಆಗಲಿ ಯಾ ಅವನಕಡೆ ನೌಕರರೇ ಆಗಲಿ ವಿರೋಧವಾಗಿ ನಡೆದುಕೊಂಡರೆ ಕಂಟ್ರಾಕ್ಟನ್ನು ವಜಾ ಮಾಡಲಾತ್ತೆ.

ಷೆಡ್ಯೂಲ್.

ಪ್ರಾಣಿ ಯಾ ಮಳಿಗೆ	ಪ್ರತ್ಯೇಕ ಹರಾಜು ಮಾಡಲ್ಪಡುತ್ತೆ.	
ಗುಡಾರ	ಪ್ರತಿಯೊಂದಕ್ಕೆ	4 ಆಣೆ.
ಎತ್ತಿನ ಗಾಡಿ ..	,,	2 ,,
ಬಡ್ಡಿರ ಗಾಡಿ ..	,,	1 ,,
ಎತ್ತಿನ ಜೋಡಿ ...	,,	6 ,,
ತಲೆ ಜೋಡಿ	,,	3 ,,

ನೋಟ್ :—ಕೊನೆ [illegible] ಪ್ರವೇಸುವಾಗಲೇ ಫೀ ವಸೂಲ್ಮಾಡತಕ್ಕದ್ದು. [illegible] ಮಾಡತಕ್ಕದ್ದು.

ಎಂ. ಕಾಂತರಾಜ ಅರಸ್,
ಪೈಸಿಡಿಪ್ಪೆ.

ಸ್ ೧೯೦೩ [illegible] ತೀರ್ಥಹಳ್ಳಿ ತಾಲ್ಲೂಕು ನವಿ
ಟೂರು ಗಾ[illegible] ಸ್ಪುಟ್ಟುಗಳು ತೀರ್ಥಹಳ್ಳಿ ತಾಲ್ಲೂಕ ಕಚೇರಿಯಲ್ಲಿ ಸ್ ೧೯೦೩ನೇ ಇಸವಿ
ಮೇ ತಾ[illegible] [illegible]ಗಂಟೆಗೆ ಹರಾಜು ಹಾಕಿಸಲ್ಪಡುವದು.

ಈ ವಿಷಯದಲ್ಲಿ ಹೆಚ್ಚಿಗೆ ತಪಸೀಲುಗಳ ಬಗ್ಯೆ 1903ನೇ ಇಸವಿ ಏಪ್ರೆಲ್ ತಿಂಗಳು ತಾರೀಖು 9ನೇ ಮೈಸೂರು ಗೆಜಟ್ಟಿನಲ್ಲಿ ಪಾಯಿಷ್ ಆಗಿರುವ ಇಸ್ತಿಹಾರನ್ನು ನೋಡಿಕೊಳ್ಳಬೇಕು.

ಬಿ. ಬಾಲಸುಂದರಂ ಐಯ್ಯರ್,
ಫಾರ್ ಡೆಪ್ಯುಟಿ ಕವಿಷನರ್,

ಮೈಸೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸ್ ೧೯೦೨—೧೯೦೩ನೇ ಇಸವಿ ಆರ್ಜೀ ನಂಬರ್ 472.

ಮೃತಪಟ್ಟ ತಿಮ್ಮಮ್ಮ ಉರಫ್ ತಂಗಚ್ಚಮ್ಮನ ಆಸ್ತೀ ವಿಷಯದಲ್ಲಿ —

ಅರ್ಜೀದಾರರು ಹುಣಸೂರು ತಾಲ್ಲೂಕು [illegible]ಟ್ಟದಪುರದಲ್ಲಿರುವ ಕೊಸಹಳ್ಳಿ ಕಾಂತಯ್ಯನ ಮಗ ದ್ಯಾವಣ್ಣ ಮೈನರ್, ಗಾರ್ಡಿಯರ್ ಭಾವ ನಾರಣಪ್ಪ, ಮೃತಪಟ್ಟ ಸದರೀ ತಿಮ್ಮಮ್ಮ ಉರಫ್ ತಂಗಚ್ಚಮ್ಮನಿಗೆ ಮಗ ಆಗಬೇಕೆಂಬ ಹಕ್ಕುದಾರ ಮೇಲೆ ಹುಣಸೂರು ತಾ॥ ಬಟ್ಟದಪುರದಲ್ಲಿ ವಾಸಸ್ಥರಾಗಿ ಮೃತಪಟ್ಟ ತಿಮ್ಮಮ್ಮ ಉರಫ್ ತಂಗಚ್ಚಮ್ಮನ ಜಿಂದಗಿ ಬಗ್ಯೆಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ VIIನೇ ಆಕ್ಟು ಮೇರಂಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಪಾಯಿಷ್ ಮಾಡಿರುತ್ತಾರೆ.